**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 1131/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ದೀಪು | ಪ್ರಾ.ಸಾ.3 |
| ತಂದೆಯ/ಗಂಡನ ಹೆಸರು | : | ಮೋಹನ್ ಕುಮಾರ್ | ಚಾ.ಸಾ.1 |
| ವಯಸ್ಸು | : | 35 ವರ್ಷ | |
| ಕೆಲಸ | : | ಪಿ.ಎಸ್.ಐ., ಐಮಂಗಳ ಪೊಲೀಸ್ ಠಾಣೆ | ಸಾ ಪ್ರ ಬೋ |
| ವಾಸ | : | ಹಿರಿಯೂರು | ದಿಃ06.02.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ದಿನಾಂಕ 08.11.2022 ರಿಂದ 01.08.2024 ರವರೆಗೆ ಚಿಕ್ಕಜಾಜೂರು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 15.07.2023 ರಂದು ಸಂಜೆ 6.30 ಗಂಟೆಯ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದಾಗ, ಠಾಣಾ ವ್ಯಾಪ್ತಿಯ ಚಿಕ್ಕೆಮ್ಮಿಗನೂರು ಗ್ರಾಮದಲ್ಲಿ ಮಂಜುನಾಥ ಬಿನ್ ಮುದ್ದಪ್ಪರ ಮಹದೇವಪ್ಪರವರು ಅವರ ಕಿರಾಣಿ ಅಂಗಡಿಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಾರಾಟ ಮಾಡಲು ಮದ್ಯವನ್ನು ಇಟ್ಟುಕೊಂಡಿರುತ್ತಾರೆ ಎಂದು ಮಾಹಿತಿ ಬಂದಿದ್ದು. ಈ ಕುರಿತು ನಾನು ಚಾಸಾ.11 ರವರಿಗೆ ಮುಂದಿನ ಕ್ರಮವನ್ನು ಜರುಗಿಸುವ ಬಗ್ಗೆ ವರದಿಯನ್ನು ನೀಡಿರುತ್ತೇನೆ. ಸಾಕ್ಷಿ ಚಾಸಾ.11 ರವರಿಗೆ ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ನಿಪಿ.6 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ನಾನು ನೀಡಿದ ವರದಿಯ ಆಧಾರದಲ್ಲಿ ಚಾಸಾ.11 ರವರು ಠಾಣಾ ಮೊಕದ್ದಮೆ ಸಂಖ್ಯೆ 115/2023 ರಂತೆ ಪ್ರ.ವ. ವರದಿಯನ್ನು ದಾಖಲಿಸಿ, ಆ ಬಗ್ಗೆ ನನಗೆ ಮಾಹಿತಿ ನೀಡಿರುತ್ತಾರೆ. ಚಾಸಾ.11 ರವರು ಮಾಹಿತಿಯನ್ನು ನೀಡಿದ ನಂತರದಲ್ಲಿ ನಾನು, ಚಾಸಾ.4 ಮತ್ತು 5 ರವರನ್ನು ಕರೆದುಕೊಂಡು ಠಾಣಾ ಜೀಪಿನಲ್ಲಿ ಸಂಜೆ 6.50 ಕ್ಕೆ ಠಾಣೆಯನ್ನು ಬಿಟ್ಟು ಚಿಕ್ಕ ಎಮ್ಮಿಗನೂರು ಗ್ರಾಮದ ಸಮೀಪ ತಲುಪಿದ್ದು, ಸದರಿ ಗ್ರಾಮದ ಹೊರಹೊಲಯದಲ್ಲಿ ಇದ್ದ ಚಾಸಾ.2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಚಾಸಾ.2 ಮತ್ತು 3 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ನೋಟೀಸನ್ನು ನೀಡಿ ಚಾಸಾ.2 ಮತ್ತು 3 ರವರನ್ನು ನಮ್ಮ ಠಾಣಾ ಜೀಪಿನಲ್ಲಿ ಚಿಕ್ಕ ಎಮ್ಮಿಗನೂರು ಗ್ರಾಮಕ್ಕೆ ಕರೆದುಕೊಂಡು ಹೋಗಿರುತ್ತೇನೆ. ಸಾಕ್ಷಿ ಚಾಸಾ.2 ಮತ್ತು 3 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ನೀಡಿದ ನಿಪಿ.ರ 1 ನೋಟೀಸಿನಲ್ಲಿನ

ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ನಾನು ಚಾಸಾ.2 ರಿಂದ 5 ರವರೊಂದಿಗೆ ಠಾಣಾ ಜೀಪಿನಲ್ಲಿ ಚಿಕ್ಕ ಎಮ್ಮಿಗನೂರು ಗ್ರಾಮದ ಮಂಜುನಾಥ ರವರ ಕಿರಾಣಿ ಅಂಗಡಿಯ ಸಮೀಪ ರಾತ್ರಿ 7.15 ಕ್ಕೆ ತಲುಪಿರುತ್ತೇವೆ. ನಾವು ಅಂಗಡಿಯ ಸ್ವಲ್ಪ ದೂರದಲ್ಲಿ ನಿಂತು ಸದರಿ ವ್ಯಕ್ತಿಯು ಮದ್ಯವನ್ನು ಮಾರಾಟ ಮಾಡುವುದನ್ನು ಖಚಿತಪಡಿಸಿಕೊಂಡಿದ್ದು, ಅಲ್ಲಿ ಇದ್ದಂತಹ ಸಾರ್ವಜನಿಕರು ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ನಂತರ ನಾನು, ಚಾಸಾ.4 ಮತ್ತು 5 ರವರೊಂದಿಗೆ ಮಂಜುನಾಥ ರವರ ಕಿರಾಣಿ ಅಂಗಡಿಯ ಬಳಿ ಹೋಗಿ ಆತನನ್ನು ಹಿಡಿಯಲು ಪ್ರಯತ್ನಿಸಿದ್ದು, ಆರೋಪಿ ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ. ನಂತರ ಆರೋಪಿ ಸ್ಥಳದಲ್ಲಿ ಬಿಟ್ಟುಹೋಗಿದ್ದ ಚೀಲವನ್ನು ಪರಿಶೀಲಿಸಲಾಗಿ, 90 ಎಂ.ಎಲ್ ನ 50 ರಾಜಾ ವಿಸ್ಕಿಯ ಪೌಚ್‌ಗಳು ಇದ್ದು ಅವುಗಳನ್ನು ಅಮಾನತ್ತುಪಡಿಸಿಕೊಂಡು, ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಬಿಳಿದಾರದಲ್ಲಿ ಕಟ್ಟಿ ಕೆ ಎಂಬ ಅಕ್ಷರದಿಂದ ಮೊಹರು ಮಾಡಿರುತ್ತೇವೆ. ಸದರಿ ಅಮಾನತ್ತುಪಡಿಸಿಕೊಂಡ ಮದ್ಯದ ಪೌಚುಗಳ ಕುರಿತು ಚಾಸಾ.2 ಮತ್ತು 3 ರವರ ಸಮಕ್ಷಮ ರಾತ್ರಿ 07.30 ರಿಂದ 8.30 ಗಂಟೆಯವರೆಗೆ ಮಹಜರಿನ ಕ್ರಮವನ್ನು ಜರುಗಿಸಿರುತ್ತೇನೆ. ಸಾಕ್ಷಿ ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಮು.ಮಾ.1 ರಲ್ಲಿನ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮು.ಮಾ.1(ಸಿ) ಎಂದು ಗುರುತಿಸಲಾಯಿತು. ಸದರಿ ದಿನದಂದು ಓಡಿ ಹೋದ ವ್ಯಕ್ತಿಯೇ ನ್ಯಾಯಾಲಯದ ಮುಂದಿರುವ ಆರೋಪಿಯೇ ಆಗಿರುತ್ತಾರೆ. ಸಾಕ್ಷಿ ಮಹಜರಿನ ಸಮಯದಲ್ಲಿ ತೆಗೆದ ಛಾಯಾಚಿತ್ರದಲ್ಲಿ ತನ್ನ ಮತ್ತು ಚಾಸಾ.2 ಮತ್ತು 3 ರವರ ಇರುವಿಕೆಯನ್ನು ಮತ್ತು ಅಮಾನತ್ತುಪಡಿಸಿಕೊಂಡ ಮದ್ಯದ ಪೌಚುಗಳನ್ನು ನೋಡಿ ಗುರುತಿಸಿರುತ್ತಾರೆ. ನಂತರ ಅಮಾನತ್ತುಪಡಿಸಿಕೊಂಡ ಮದ್ಯದ ಮಾಲನ್ನು ಪಂಚನಾಮೆಯೊಂದಿಗೆ ಠಾಣೆಗೆ ತಂದು ಚಾಸಾ.11 ರವರಿಗೆ ವರದಿ ಮಾಡಿರುತ್ತೇನೆ. ಆರೋಪಿತನು ಮಾನ್ಯ ಸತ್ರ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಬಂದು ಚಾಸಾ.11 ರವರ ಸಮಕ್ಷಮ ಹಾಜರಾದ ಸಮಯದಲ್ಲಿ ಆರೋಪಿತನನ್ನು ನೋಡಿ ಗುರುತಿಸಿದ್ದು, ಆ ಬಗ್ಗೆ ಚಾಸಾ.11 ರವರಿಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : ಆರೋಪಿಯ ಪರ ಶ್ರೀ ಎಸ್.ವಿ.ಕೆ. ವಕೀಲರಿಂದ**

3. ದಿ.15.07.2023 ರಂದು ನಾನು ಚಿಕ್ಕಜಾಜೂರು ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದೆನು. ಘಟನಾ ಸ್ಥಳ ನಮ್ಮ ಠಾಣೆಯಿಂದ 8 ಕಿ.ಮೀ. ಅಂತರದಲ್ಲಿದ್ದು, ದಿಕ್ಕು ಗೊತ್ತಿಲ್ಲ. ಘಟನಾ ಸ್ಥಳಕ್ಕೆ ನಾವು ಸಂಜೆ 7.15 ರಿಂದ 7.30 ರ ಮಧ್ಯದಲ್ಲಿ ತಲುಪಿರುತ್ತೇವೆ. ಸದರಿ ಸಮಯದಲ್ಲಿ ಕತ್ತಲಾಗಿತ್ತು ಎಂದರೆ ಸರಿ.

ನಾವು ಸ್ಥಳಕ್ಕೆ ಠಾಣಾ ಜೀಪಿನಲ್ಲಿ ಹೋಗಿರುತ್ತೇವೆ. ಠಾಣಾ ಜೀಪನ್ನು ನಿಲ್ಲಿಸಿದ್ದ ಸ್ಥಳದ ಚೆಕ್ಕುಬಂದಿ ಗೊತ್ತಿಲ್ಲ. ಜೀಪನ್ನು ನಿಲ್ಲಿಸಿದ್ದ ಸ್ಥಳದಿಂದ ಘಟನಾ ಸ್ಥಳಕ್ಕೆ 50 ರಿಂದ 100 ಮೀಟರ್ ಅಂತರ ಇತ್ತು. ನಾವು ಮರೆಮಾಚಿ ನಿಂತು ನೋಡುತ್ತಿದ್ದಾಗ, ಆರೋಪಿ ಸಾರ್ವಜನಿಕರಿಗೆ ಮದ್ಯವನ್ನು ಮಾರಾಟ ಮಾಡುತ್ತಿರುವುದು ಕಂಡುಬಂತು. ಆರೋಪಿತನು ನಮ್ಮನ್ನು ನೋಡಿ ಓಡಿ ಹೋಗಿದ್ದು, ಹಿಡಿಯಲು ಪ್ರಯತ್ನಿಸಿದ್ದು, ಕತ್ತಲಾಗಿದ್ದ ಕಾರಣ ಸಿಗಲಿಲ್ಲ. ನಾವು ಆರೋಪಿತನನ್ನು 50 ಮೀಟರ್ ಅಂತರದಲ್ಲಿ ನೋಡಿದ್ದು, ಹಾಗಾಗಿ ಆರೋಪಿತನನ್ನು ಗುರುತಿಸಿದ್ದೆನು. ಅಂದು ಓಡಿ ಹೋದ ವ್ಯಕ್ತಿಯೇ ಈ ದಿನ ನ್ಯಾಯಾಲದಯ ಮುಂದಿರುವ ವ್ಯಕ್ತಿ ಆಗಿರುತ್ತಾನೆ. ಆರೋಪಿ ಘಟನೆಯ ದಿನದಂದು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದರು ಎಂದು ಗೊತ್ತಿಲ್ಲ. ಸ್ಥಳದ ಮಹಜರಿನ ಚೆಕ್ಕುಬಂದಿ ಪೂರ್ವಕ್ಕೆ ರವೀಶಪ್ಪರವರ ವಾಸದ ಮನೆ, ಪಶ್ಚಿಮಕ್ಕೆ ಕಾಲುದಾರಿ ನಂತರ ತಳವಾರ ಚಂದ್ರಪ್ಪರವರ ವಾಸದ ಮನೆ, ಉತ್ತರಕ್ಕೆ ಆರೋಪಿತರ ಕಿರಾಣಿ ಅಂಗಡಿ, ದಕ್ಷಿಣಕ್ಕೆ ಬಡಗೇರ ಉಮೇಶ್‌ರವರ ಖಾಲಿ ಜಾಗ ಇದೆ. ಆರೋಪಿ ಓಡಿ ಹೋದ ನಂತರ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಠಾಣೆಗೆ ಹಾಜರಾಗಿರುತ್ತಾನೆ. ಅಮಾನತ್ತುಪಡಿಸಿಕೊಂಡ ಮದ್ಯದ ಪೌಚುಗಳ ಬ್ಯಾಚ್ ಸಂಖ್ಯೆಯನ್ನು ಮಹಜರಿನಲ್ಲಿ ಉಲ್ಲೇಖ ಮಾಡಿದ್ದೇನೆ. ಆರೋಪಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಕಾರಣ ನಾವು ದಾಳಿ ಮಾಡಿದ್ದೆವು. ಆರೋಪಿ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸಮಯದಲ್ಲಿ ಆರೋಪಿ ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ತಪ್ಪನ್ನು ಎಸಗದಿದ್ದಾಗ್ಯೂ, ಸುಳ್ಳು ದೂರನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ__